ವ್ಯವಹಾರಿಕ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ

ಸಿಸಿ ಸಂಃ 1052/2021

| | | |
|---|---|---|
| ಸಾಕ್ಷಿಯ ಹೆಸರುಃ | ಡಾಃ ಶಿವಪ್ರಕಾಶ್ ಹೆಚ್.ಎಂ | ಫ್ರಾಸಾಃಃ 7 |
| ತಂದೆ ಹೆಸರುಃ | ಮಹಾದೇವಯ್ಯ | ಚಾಸಾಃಃ 17 |
| ವಯಸ್ಸುಃ | 48 ವರ್ಷ | ಪ್ರಮಾಣೀಕರಿಸಿದ ದಿಃ 19.09.2026 |
| ಉದ್ಯೋಗಃ | ತಜ್ಞವೈದ್ಯರು , ಸಾರ್ವಜನಿಕ ಆಸ್ಪತ್ರೆ ಕೆ.ಆರ್.ಪೇಟೆ | |
| ವಾಸಸ್ಥಳಃ | ಕೆ.ಆರ್.ಪೇಟೆ | |

ಮುಖ್ಯ ವಿಚಾರಣೆಃ ಸಸಅ ರಿಂದಃ

ನಾನು ಪಿರಿಯಾಪಟ್ಟಣ ಸಾರ್ವಜನಿಕ ಆಸ್ಪತ್ರೆಯಲ್ಲಿ 2015 ರಿಂದ ಜುಲೈ 2025 ರವರೆಗೆ ತಜ್ಞವೈದ್ಯರಾಗಿ ಕಾರ್ಯ ನಿರ್ವಹಿಸುತ್ತಿರುತ್ತೇನೆ.

1. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ 26.08.2019 ರಂದು ರಾತ್ರಿ 8-25 ಗಂಟೆಗೆ ಸುರೇಶ ಎಂಬುವವರು, ಅಪಘಾತದ ಹಿನ್ನೆಲೆಯಲ್ಲಿ ನಮ್ಮ ಆಸ್ಪತ್ರೆಗೆ ಬಂದಿದ್ದರು. ಅವರನ್ನು ತಪಾಸಣೆ ಮಾಡಿದಾಗ, ಅವರಿಗೆ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

   1) ಬಲ ಕಿವಿಯಿಂದ ರಕ್ತಸ್ರಾವವಾಗಿತ್ತು.

   2) ತಲೆಯ ಹಿಂಭಾಗದಲ್ಲಿ ಕತ್ತರಿಸಿದ ಗಾಯ ಕಂಡು ಬಂದಿರುತ್ತದೆ.

   3) ಹಲ್ಲು ಮುರಿದಿರುವುದು ಕಂಡು ಬಂದಿರುತ್ತದೆ.

   4) ಮೂಗಿನಿಂದ ರಕ್ತಸ್ರಾವವಾಗಿತ್ತು.

2. ನಂತರ ಸದರಿಯವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇನೆ. ಆ ಬಗ್ಗೆ ಪಿರಿಯಾಪಟ್ಟಣ ಠಾಣೆಗೆ ಮೆಮೋ ಮತ್ತು ಎಂ.ಎಲ್.ಸಿ ಎಕ್ಸಟ್ರಾಕ್ಟನ್ನು ಕಳುಹಿಸಿಕೊಟ್ಟಿರುತ್ತೇನೆ.

3. ಸಾಕ್ಷಿಯು ಮೆಮೋ ಮತ್ತು ಎಂ.ಎಲ್.ಸಿ ಎಕ್ಸಟ್ರಾಕ್ಟನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-18 ಮತ್ತು 19 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ - **18(ಬಿ)** ಮತ್ತು **19(ಬಿ)** ಎಂದು ಗುರುತಿಸಲಾಯಿತು.

4 ಸಾಮಾನ್ಯವಾಗಿ ಒಬ್ಬ ವ್ಯಕ್ತಿಗೆ ದ್ವಿಚಕ್ರ ವಾಹನದಲ್ಲಿ ಅಪಘಾತವಾದರೆ ಮೇಲೆ ಹೇಳಿದ ಗಾಯಗಳು ಆಗುತ್ತವೆ.

5. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ 26.08.2019 ರಂದು ರಾತ್ರಿ 8-45 ಗಂಟೆಗೆ ಶಿವಕುಮಾರ ಎಂಬುವವರು, ಅಪಘಾತದ ಹಿನ್ನೆಲೆಯಲ್ಲಿ ನಮ್ಮ ಆಸ್ಪತ್ರೆಗೆ ಬಂದಿದ್ದರು. ಅವರನ್ನು ತಪಾಸಣೆ ಮಾಡಿದಾಗ, ಅವರಿಗೆ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

1) ಹಣೆಯ ಮೇಲೆ ಕತ್ತರಿಸಿದ ಗಾಯ ಕಂಡು ಬಂದಿರುತ್ತದೆ.

2. ನಂತರ ಸದರಿಯವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇನೆ. ಆ ಬಗ್ಗೆ ಪಿರಿಯಾಪಟ್ಟಣ ಠಾಣೆಗೆ ಮೆಮೋ ಮತ್ತು ಎಂ.ಎಲ್.ಸಿ ಎಕ್ಸಟ್ರಾಕ್ಟನ್ನು ಕಳುಹಿಸಿಕೊಟ್ಟಿರುತ್ತೇನೆ.

3. ಸಾಕ್ಷಿಯು ಮೆಮೋ ಮತ್ತು ಎಂ.ಎಲ್.ಸಿ ಎಕ್ಸಟ್ರಾಕ್ಟನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-18 ಮತ್ತು 19 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು **19(ಸಿ)** ಎಂದು ಗುರುತಿಸಲಾಯಿತು.

ಸಾಮಾನ್ಯವಾಗಿ ಒಬ್ಬ ವ್ಯಕ್ತಿಗೆ ದ್ವಿಚಕ್ರ ವಾಹನದಲ್ಲಿ ಅಪಘಾತವಾದರೆ ಮೇಲೆ ಹೇಳಿದ ಗಾಯಗಳು ಆಗುತ್ತವೆ.

<u>ಪಾಟೀ ಸವಾಲುಃ ಆರೋಪಿಗಳ ಪರ ವಕೀಲರುಗಳಿಂದ</u>

1. ಒಬ್ಬ ವ್ಯಕ್ತಿ ವೇಗವಾಗಿ ನಡೆದುಕೊಂಡು ಹೋಗುವಾಗ ಕಲ್ಲು, ಚರಂಡಿ ಅಥವಾ ಚೂಪಾದ ವಸ್ತುವಿನ ಮೇಲೆ ಬಿದ್ದಾಗ ಮೇಲೆ ಹೇಳಿದ ಗಾಯಗಳು ಆಗುವ ಸಾಧ್ಯತೆ ಇವೆ ಎಂದರೆ ಸರಿ.
2. ಗಾಯಾಳು ಒಬ್ಬರೇ ಬಂದಿದ್ದರಾ ಅಥವಾ ಬೇರೆ ಯಾರು ಕರೆದುಕೊಂಡು ಬಂದಿದ್ದರಾ ಎಂದು ನನಗೆ ಗೊತ್ತಿಲ್ಲ.
3. ಸುರೇಶ ಹಾಗೂ ಶಿವಕುಮಾರ ರವರು ನನ್ನ ಮುಂದೆ ಹಾಜರಾಗಿಲ್ಲ ಮತ್ತು ನಾನು ಅವರಿಗೆ ಯಾವುದೇ ಚಿಕಿತ್ಸೆ ನೀಡಿಲ್ಲ ಎಂದರೆ ಸರಿಯಲ್ಲ.
4. ನಾನು ಪೊಲೀಸರ ಮಾತು ಕೇಳಿ, ಪಿರ್ಯಾದುದಾರರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.
ಪಿರಿಯಾಪಟ್ಟಣ